**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ., ನ್ಯಾಯಾಲಯ,ಹೊಸಕೋಟೆ**

**ಸಿಸಿ.ನಂ.7393/2023**

ಶ್ರೀ. ಸಿ.ಬಿ. ನಾರಾಯಣಸ್ವಾಮಿ,
ಬಿನ್. ಲೇಟ್ ಬೈರಪ್ಪ,
ವಯಸ್ಸು 48 ವರ್ಷ,
ವಾಸ: ಶ್ರೀರಾಮಪುರ ಗ್ರಾಮ,
ಯಲಹಂಕ ಹೋಬಳಿ,
ಬೆಂಗಳೂರು ಉತ್ತರ. .. .. ಪಿರ್ಯಾದುದಾರರು

–ವಿರುದ್ದ–

ಕೆ.ವಿ. ಅಂಬರೀಷ್
ಬಿನ್. ವೆಂಕಟರಮಣಪ್ಪ,
ವಯಸ್ಸು 37 ವರ್ಷ,
ವಾಸ: ಕುರುಬರಹಳ್ಳಿ ಗ್ರಾಮ,
ಕಸಬಾ ಹೋಬಳಿ, ಹೊಸಕೋಟೆ ತಾಲ್ಲೂಕು,
ಬೆಂಗಳೂರು ಗ್ರಾಮಾಂತರ ಜಿಲ್ಲೆ. .. .. ಆರೋಪಿ

***

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರನ್ವಯ ಆರೋಪಿ ಹೇಳಿಕೆಃ**

ಪ್ರಶ್ನೆ **1 -** ನ್ಯಾಯಾಲಯದಲ್ಲಿ ವಿಚಾರಣೆ ಮಾಡಿದ ಸಾಕ್ಷಿಗಳ ಹೇಳಿಕೆಗಳನ್ನು ಕೇಳಿದ್ದೀರಾ**?**

ಉತ್ತರಃ

**ಪ್ರಶ್ನೆ 2:- ಪಿಡಬ್ಲ್ಯೂ -1 ಸಿ.ಬಿ. ನಾರಾಯಣಸ್ವಾಮಿ ರವರು ತಮ್ಮ ಸಾಕ್ಷ್ಯದಲ್ಲಿ** ಆರೋಪಿಯಾದ ನೀವು ಫಿರ್ಯಾದಿದಾರರಿಂದ ರೂ.**70,000/-**ಗಳನ್ನು ಸಾಲವಾಗಿ ಪಡೆದುಕೊಂಡಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನಾದರೂ ಹೇಳಲು ಇಚ್ಛಿಸುವಿರಾ?

**ಉತ್ತರ:-**

**ಪ್ರಶ್ನೆ 3 : ಪಿಡಬ್ಲ್ಯೂ -1 ಸಿ.ಬಿ. ನಾರಾಯಣಸ್ವಾಮಿ ರವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ** ಸದ್ರಿ ಸಾಲದ ಮರುಪಾವತಿಯ ಸಲುವಾಗಿ ದಿನಾಂಕ **30.03.2023** ರಂದು ರೂ.**70,000/**- ಗಳಿಗೆ ಆಕ್ಸೀಸ್ ಬ್ಯಾಂಕ್ ಲಿಮಿಟೆಡ್**,** ಹೊಸಕೋಟೆ ಶಾಖೆಗೆ ಸಂಬಂಧಪಟ್ಟಂತೆ ಚೆಕ್ಕು ಸಂಖ್ಯೆ **140130** ನ್ನು ಪಿರ್ಯಾದಿದಾರರಿಗೆ ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನಾದರೂ ಹೇಳಲು ಇಚ್ಛಿಸುವಿರಾ?

**ಉತ್ತರ :**

**ಪ್ರಶ್ನೆ 4 : ಪಿಡಬ್ಲ್ಯೂ -1 ಸಿ.ಬಿ. ನಾರಾಯಣಸ್ವಾಮಿ ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು** ಸದ್ರಿ ಚೆಕ್ಕನ್ನು ನಗದೀಕರಿಸಲು ಐಸಿಐಸಿ ಬ್ಯಾಂಕ್, ಬೆಂಗಳೂರು ಶಾಖೆಗೆ ಹಾಜರುಪಡಿಸಿದ್ದು, ದಿನಾಂಕ **22.05.2023** ರಂದು ಸದರಿ ಚೆಕ್ಕು ಮಾನ್ಯಗೊಳ್ಳದೆ **"Not credited/not written"** ಎಂಬ ಹಿಂಬರಹದೊಂದಿಗೆ ಹಿಂತಿರುಗಿ ಬಂದಿದ್ದು, ನಂತರ ದಿನಾಂಕ **16.06.2023** ರಂದು ವಕೀಲರ ಮೂಲಕ ನೋಟಿಸು ಜಾರಿ ಮಾಡಿದ್ದು, ಸದ್ರಿ ನೋಟಿಸನ್ನು ಸ್ವೀಕರಿಸಿ ಚೆಕ್ಕಿನ ಬಾಬ್ತು ಹಣವನ್ನು ಪಿರ್ಯಾದುದಾರರಿಗೆ ನೀಡಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನಾದರೂ ಹೇಳಲು ಇಚ್ಛಿಸುವಿರಾ?

**ಉತ್ತರ :**

ಪ್ರಶ್ನೆ 5 **:** ಈ ಪ್ರಕರಣದ ಬಗ್ಗೆ ನಿಮಗೆ ಏನಾದರೂ ಹೇಳುವುದು ಇದೆಯೆ**?**

ಉತ್ತರ **:**

ಪ್ರಶ್ನೆ6: ನಿಮ್ಮ ಪರ ಸಾಕ್ಷ್ಯ ವಿಚಾರಣೆ ಮಾಡಿಸುವಿರಾ?

ಉತ್ತರ :

(ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಕೇಳಿ ಅವನು ಕೊಟ್ಟ ಉತ್ತರಗಳನ್ನು ದಾಖಲಿಸಿಕೊಂಡಿದ್ದು ಅವು ಸರಿಯಾಗಿವೆ ಮತ್ತು ಸಂಪೂರ್ಣವಾಗಿವೆ ಎಂದು ದೃಢೀಕರಿಸುತ್ತೇನೆ)

ಪ್ರ. ಸಿ. ನ್ಯಾ. ಮತ್ತು ಪ್ರ.ದ.ನ್ಯಾ.ದಂ.,
ಹೊಸಕೋಟೆ.